ಚಿನ್ನಪ್ಪನೂ ಸುಬ್ಬಮ್ಮನ ಮನೆಗೆ ಬಂದು, ಅವಳು ಮಾಡುತ್ತಿದ್ದ ರುಚಿಯಾದ ರಾಗಿರೊಟ್ಟಿ ತಿಂದು ಹೋಗುತ್ತಿದ್ದ. ಈ ವಿಷಯವನ್ನು ಅಪ್ಪ ರಾಮೇಗೌಡರಿಗೆ ಮಾತ್ರ ಹೇಳಬೇಡಿ ಎಂದೂ ಕೇಳಿಕೊಳ್ಳುತ್ತಿದ್ದ. ಏಕೆಂದರೆ ಕೂಲಿಯವಳ ಮನೆಯಲ್ಲಿ, ಅದೂ ಅಲ್ಲದೆ ಬೇರೆ ಜಾತಿಯವಳ ಮನೆಯಲ್ಲಿ ತಿಂದರೆ ರಾಮೇಗೌಡ ಮಗನನ್ನು ಸುಮ್ಮನೆ ಬಿಟ್ಟಾನೆಯೇ? ಈಗ ಸುಬ್ಬಮ್ಮನಿಗೆ ಚಿನ್ನಪ್ಪನನ್ನು ನೋಡುತ್ತಿದ್ದರೆ ಹಳೆಯ ಈ ವಿಷಯಗಳೆಲ್ಲಾ ಜ್ಞಾಪಕಕ್ಕೆ ಬರುತ್ತಿದ್ದವು. ಸುಬ್ಬಮ್ಮ ಎಷ್ಟೇ ವಾತ್ಸಲ್ಯದಿಂದ ಈಗ ಮಾತನಾಡಿಸಿದರೂ ಕೂಡ ಚಿನ್ನಪ್ಪ ಮಾತ್ರ ಮುಖ ಗಂಟಿಕ್ಕಿಕೊಂಡೇ ಎಲ್ಲಾ ಕೂಲಿಯವರೊಂದಿಗೆ ಮಾತನಾಡುವಷ್ಟೇ ತಾತ್ಸಾರದಿಂದ ಸುಬ್ಬಮ್ಮನೊಂದಿಗೂ ಮಾತನಾಡುತ್ತಿದ್ದ. ಎಷ್ಟೇ ಆಗಲಿ ಈಗ ಚಿನ್ನಪ್ಪ ಊರಿಗೇ ದೊಡ್ಡ ಮನುಷ್ಯ. ಅದೂ ಅಲ್ಲದೇ ಈಗ ಊರಿಗೇ ಚೇರ್ಮನ್. ಕೂಲಿಯವರೊಂದಿಗೆ ತನಗೇನೂ ಸದರ ಎಂದಿರಬೇಕು.

ಅಂದೂ ಕೂಡ ಎಂದಿನಂತೆ ರಾಮೇಗೌಡರ ಹೊಲದಲ್ಲಿ ತನ್ನ ಕೆಲಸದಲ್ಲಿ ಮಗ್ನಳಾಗಿದ್ದ ಸುಬ್ಬಮ್ಮನಿಗೆ ಪಕ್ಕದ ಮನೆಯ ಕುಸುಮಾ ಒಂದೇ ಉಸಿರಿಗೆ ಓಡಿ ಬರುತ್ತಿರುವುದು ಕಾಣಿಸಿತು. ಎಲ್ಲರೂ ಏನಾಯಿತೆಂದು ಗಾಬರಿಗೊಂಡು ನೋಡುತ್ತಿರುವಾಗಲೇ, ಕುಸುಮಾ ಒಂದೇ ಸಮನೇ ಏದುಸಿರು ಬಿಡುತ್ತಾ, ಅಳುತ್ತಾ, 'ಅತ್ತೆ, ನಮ್ಮ ಸರ್ವಸ್ವವೂ ಹೋಯ್ತು, ಬಾಬುವನ್ನು ನಿನ್ನೆ ಯುದ್ಧದಲ್ಲಿ ಶತ್ರುದೇಶದ ಆ ಪಾಪಿಗಳು ಕೊಂದು ಹಾಕಿದ್ದಾರಂತೆ' ಎಂದಳು. ಕುಸುಮಾ ಹೇಳಿದ ವಿಷಯವನ್ನು ಸುಬ್ಬಮ್ಮನಿಗೆ ಅರಗಿಸಿಕೊಳ್ಳಲಾಗಲಿಲ್ಲ. ಗರಬಡಿದವಳಂತೆ 'ಅಯ್ಯೋ ದೇವರೇ, ಏನು ಹೇಳ್ತಾ ಇದ್ದಿಯೇ? ನನ್ನ ಮಗಿಗೆ ಏನಾಯ್ತಪ್ಪ?' ಎಂದು ಎದೆ ಬಡಿದುಕೊಳ್ಳುತ್ತಾ ಸುಬ್ಬಮ್ಮ ಅಲ್ಲೇ ಕುಸಿದು ಬಿದ್ದಳು. ತಕ್ಷಣ ಅಲ್ಲಿದ್ದ ಹೆಂಗಸರು ಓಡಿಬಂದು ಸುಬ್ಬಮ್ಮನ ಮುಖದ ಮೇಲೆ ನೀರು ಚಿಮುಕಿಸಿ, ಕೆನ್ನೆ ತಟ್ಟಿ ಕೈಕಾಲು ಉಜ್ಜಿ ಎಬ್ಬಿಸಿ, ಬಲವಂತವಾಗಿ ಸ್ವಲ್ಪ ನೀರು ಕುಡಿಸಿದರು. ಪ್ರಜ್ಞೆ ಬಂದು ವಿಷಯ ಅರ್ಥವಾಗಿ ಗೋಳಾಡತೊಡಗಿದ್ದ ಸುಬ್ಬಮ್ಮನನ್ನು ಮೂರ್ನಾಲ್ಕು ಹೆಂಗಸರು ಹೊಲದಿಂದ ಮನೆಯ ಹತ್ತಿರ ಕರೆದುಕೊಂಡು ಬಂದರು.

ಇವರು ಮನೆಯ ಹತ್ತಿರ ಬಂದಾಗ ಈಗಾಗಲೇ ಅಲ್ಲಿ ನೂರಾರು ಜನ ಸೇರಿದ್ದರು. ಬೆಳಗ್ಗೆಯಿಂದಲೇ ಟಿವಿಯಲ್ಲಿ ಯುದ್ಧದಲ್ಲಿ ಬಾಬಣ್ಣ ಸತ್ತ ಸುದ್ದಿ ಬಂದಿತಂತೆ. ಅದನ್ನು ಯಾರೂ ಗಮನಿಸಿರಲಿಲ್ಲ. ಕೂಲಿಗೆ ಹೋಗಿ ಪೈಸೆಗೆ ಪೈಸೆ ಕೂಡಿಟ್ಟು ಈ ವರ್ಷ ಮಗನ ಮದುವೆ ಮಾಡಬೇಕೆಂದು ಸುಬ್ಬಮ್ಮ ಆಲೋಚಿಸಿದ್ದಳು. ಸೈನ್ಯಕ್ಕೆ ಸೇರಿದ್ದ ಮಗ ಅಲ್ಲೆಲ್ಲೋ ಹಿಮಾಲಯದ ಹತ್ತಿರ ತನ್ನ ಕೆಲಸ ಎಂದು ಕಳೆದ ಬಾರಿ ರಜಕ್ಕೆ ಬಂದಾಗ ಹೇಳಿದ್ದ. 'ಅಷ್ಟು ದೂರ ಯಾಕಪ್ಪಾ? ಇಲ್ಲೇ ಎಲ್ಲಾದರೂ ಹತ್ರಕ್ಕೆ ಹೇಳಿ ಹಾಕಿಸಿಕೊಳ್ಳೋಕೆ ಆಗಲ್ವಾ?' ಎಂದು ಸುಬ್ಬಮ್ಮ ಕೇಳಿದಾಗ, 'ಅದು ಕಷ್ಟ ಕಣಮ್ಮ, ನೀನೇನೂ ಯೋಚನೆ ಮಾಡ್ಬೇಡ ಇನ್ನೊಂದೆರಡು ವರ್ಷ ಕೆಲಸ ಮಾಡಿ ಆಮೇಲೆ ಈ ಕಡೇನೇ ಬರ್ತೀನಿ' ಎಂದು ಹೇಳಿ ಹೋಗಿದ್ದ ಮಗ, ಹೀಗೆ ಹೆಣವಾಗಿ ಮನೆಗೆ ಬರುತ್ತಾನೆಂದರೆ ನಂಬುವುದು ಹೇಗೆ?

ಯಾವಾಗ ಬಾಬಣ್ಣ ಶತ್ರುದೇಶದ ಪಾಪಿಗಳ ಗುಂಡಿಗೆ ಬಲಿಯಾದನೆಂದು ಟಿವಿಯಲ್ಲಿ ಪ್ರಸಾರವಾಗಿ, ಹೆಣವನ್ನು ಇಂದು ತರುತ್ತಾರೆಂದೂ, ಮಣ್ಣು ಮಾಡಲು ಪೊಲೀಸ್‌ನವರು, ತಹಶೀಲ್ದಾರ್, ಡಿಸಿ, ರಾಜಕೀಯ ನಾಯಕರೂ, ಮಂತ್ರಿಗಳು ಮತ್ತು ಸುತ್ತಮುತ್ತಲ ಊರಿನವರೂ ಬರತೊಡಗುತ್ತಿದ್ದಂತೆ ಅಲ್ಲಿಗೆ ವಿವಿಧ ಟಿವಿ ಚಾನೆಲ್‌ಗಳು ಬಂದು ನೇರ ಪ್ರಸಾರ ಶುರು ಮಾಡಿದವು. ಅಲ್ಲಿಗೆ ಕುಗ್ರಾಮವಾದ ಸೋಮನಹಳ್ಳಿಯ ಹೆಸರು ಕರ್ನಾಟಕದಲ್ಲೆಲ್ಲಾ ರಾರಾಜಿಸತೊಡಗಿತು. ತನ್ನ ಊರಿನಲ್ಲಿ ತನ್ನ ಮನೆಯ ಹತ್ತಿರ ಇಷ್ಟೊಂದು ಜನರನ್ನು ಸುಬ್ಬಮ್ಮ ಜೀವನದಲ್ಲಿಯೇ ನೋಡಿರಲಿಲ್ಲ. ಸುಬ್ಬಮ್ಮಳ ರೋದನ ದೃಶ್ಯಗಳು ಮತ್ತು ಹುತಾತ್ಮ ಬಾಬಣ್ಣನ ಚಿತ್ರಗಳು ಟಿವಿಯಲ್ಲಿ ನಿರಂತರವಾಗಿ ಮೂಡಿಬರತೊಡಗಿದವು.

ಹಳ್ಳಿಯ ಮುಖಂಡರನ್ನು ಮತ್ತು ಬಾಬಣ್ಣನ ಸ್ನೇಹಿತರನ್ನು ಟಿವಿ ಚಾನೆಲ್‌ನವರು ಮಾತನಾಡಿಸುತ್ತಾ, ಬಾಬಣ್ಣನ ಬಗ್ಗೆ ಹಲವಾರು ವಿಷಯಗಳನ್ನು ಕೇಳುತ್ತಾ, ಕೆದಕುತ್ತಾ ಚರ್ಚಿಸ